# ಪಂಚಾಯತ್ ರಾಜ್ ಆಯುಕ್ತಾಲಯದ ನಡವಳಿ

**ವಿಷಯ:** ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯಮಟ್ಟದ ಜೇಷ್ಠತಾ ಪಟ್ಟಿ ಪ್ರಕಟಿಸುವ ವಿಷಯವನ್ನು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಮರು ಹಂಚಿಕೆ ಮಾಡುವ ಬಗ್ಗೆ.- ಆದೇಶ.

**ಓದಲಾಗಿದೆ:**

1. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾಅಪ 374 ಗ್ರಾಪಂಕಾ 2013. ದಿನಾಂಕ:20.02.2014
2. ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ: 2259-2261/2014 ಮತ್ತು ಇತರೆ ಅರ್ಜಿಗಳಲ್ಲಿ ನೀಡಿದ ಆದೇಶ ದಿನಾಂಕ:18.03.2019
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 197 ಗ್ರಾಪಂಕಾ 2019. ದಿನಾಂಕ: 17.02.2021.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/352/ಗ್ರಾಪಂಕಾ/2019 ಬೆಂಗಳೂರು, ದಿನಾಂಕ:17.07-2021

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಅ. ಜ್ಞಾ. ಪತ್ರದಲ್ಲಿ ಹೊರಡಿಸಿದ್ದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಆದೇಶದಲ್ಲಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ರದ್ದುಗೊಳಿಸಿ ಪರಿಷ್ಕೃತ ಜೇಷ್ಠತಾಪಟ್ಟಿ ಪ್ರಕಟಿಸಲು ಸೂಚಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ಸರ್ಕಾರದ ಆದೇಶದಲ್ಲಿ ಪಂಚಾಯತ್ ರಾಜ್ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು. ಈಗಾಗಲೇ ಅವರ ಅಧ್ಯಕ್ಷತೆಯಲ್ಲಿ ಸಭೆಗಳು ಜರುಗಿರುತಿದ್ದು,. ಹಾಲಿ ಪ್ರಭಾರಿ ಸರ್ಕಾರದ ಅಧೀನ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಬಿ ನವೀನ್ ಕುಮಾರ್ ಇವರು ಈ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿ ಕರ್ತವ್ಯ ನಿರ್ವಹಿಸಿದ್ದು, ಪ್ರಸ್ತುತ ಹಾಲಿ ಉಪ ನಿರ್ದೇಶಕರು-1, ಕರ್ನಾಟಕ ಪಂ.ರಾಜ್ ಆಯುಕ್ತಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿನ್ನೆಯಲೆಯಲ್ಲಿ ಮತ್ತು ಪಂಚಾಯತ್ ರಾಜ್ ಆಯುಕ್ತಾಲಯವು ರಾಜ್ಯ ಮಟ್ಟದ ಕೇಂದ್ರ ಕಛೇರಿಯಾಗಿರುವುದರಿಂದ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಆ ಕಛೇರಿಯಿಂದಲೇ ಜಿಲ್ಲಾ ಪಂಚಾಯತ್ ಗಳೊಂದಿಗೆ ವ್ಯವಹರಿಸಿ ಜಿಲ್ಲಾ ಮಟ್ಟದ ಜೇಷ್ಠತಾಪಟ್ಟಿಗಳನ್ನು ಪಡೆದು ರಾಜ್ಯ ಮಟ್ಟದ ಕ್ರೂಢೀಕೃತ ಪಟ್ಟಿಯನ್ನು ಪ್ರಕಟಗೊಳಿಸುವುದು ಸಮಂಜಸವಾಗಿರುವುದೆಂದು ಸರ್ಕಾರವು ಪರಿಗಣಿಸಿ ಈ ವಿಷಯವನ್ನು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತರ ಕಛೇರಿಯಲ್ಲಿಯೇ ವ್ಯವಹರಿಸಿ ಮುಂದಿನ ಕ್ರಮ ವಹಿಸಲು ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರಿಗೆ ಮರು ವರ್ಗಾಯಿಸಲು ಸರ್ಕಾರವು ನಿರ್ಣಯಿಸಿ ,ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿ ಪ್ರಕಟಿಸುವ ಕಾರ್ಯವನ್ನು ಇನ್ನು ಮುಂದೆ ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ. ಹಾಗೂ ಶ್ರೀ ಬಿ ನವೀನ್ ಕುಮಾರ್, ಉಪ ನಿರ್ದೇಶಕರು-1, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರವರು ಎಲ್ಲಾ ಕಡತಗಳನ್ನು ಸ್ವೀಕರಿಸಿ ಇನ್ನು ಮುಂದೆ ಕಾರ್ಯನಿರ್ವಹಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸೂಚ್ಯಾದೇಶಿಸಿರುತ್ತಾರೆ.

ಅದರಂತೆ , ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಸರ್ಕಾರದ ಆದೇಶದಂತೆ ರಾಜ್ಯ ಮಟ್ಟದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು 2020-21 ನೇ ಸಾಲಿನಂತೆ ತಯಾರಿಸಲು ಹಾಗೂ ನಿರ್ವಹಿಸಲು ಪ್ರತ್ಯೇಕವಾಗಿ ಒಂದು ವಿಷಯ ತಜ್ಞರು/ ವಿಷಯನಿರ್ವಾಹಕರು ರವರ ಅವಶ್ಯಕತೆ ಇರುವುದರಿಂದ ಹಾಗೂ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಕಾರ್ಯನಿರ್ವಹಿಸುತಿರುವ ವಿಷಯ ತಜ್ಞರು/ಸಮಾಲೋಚಕರಾಗಿ ಶ್ರೀ ಮುಬಾರಕ್ ಅಹ್ಮದ್ ರವರು ಕಾರ್ಯನಿರ್ವಹಿಸುತಿರುವುದರಿಂದ ಸದರಿ ವಿಷಯವನ್ನು ನಿರ್ವಹಿಸಲು ಶ್ರೀ ಮುಬಾರಕ್ ಅಹ್ಮದ್ ರವರಿಗೆ ವಹಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ,

## ಆದೇಶ ಸಂಖ್ಯೆ: ಗ್ರಾಅಪ 352 ಗ್ರಾಪಂಕ 2019 (ಭಾಗ-1)ಬೆಂಗಳೂರು, ದಿನಾಂಕ:17.09.2021

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ರಾಜ್ಯ ಮಟ್ಟದ ಜೇಷ್ಠತಾಪಟ್ಟಿಯನ್ನು ಸಿದ್ದಪಡಿಸಿ ಪ್ರಕಟಿಸುವ ಕಾರ್ಯವನ್ನು ಇನ್ನು ಮುಂದೆ ನಿರ್ವಹಿಸುವ ಸಲುವಾಗಿ ವಿಷಯವನ್ನು ಈ ಸಂಬಂಧದಲ್ಲಿ ಇರುವ ಈ ಕೆಳಕಂಡ ಕಡತಗಳನ್ನು ಶ್ರೀ ನವೀನ್ ಕುಮಾರ್ ಬಿ, ಉಪನಿರ್ದೇಶಕರು-1 ರವರಿಂದ ಪಡೆದು ಶ್ರೀ ಭರತ್ ರವರು ವಿಷಯ ನಿರ್ವಾಹಕರಾಗಿ ಕಾರ್ಯನಿರ್ವಹಿಸಲು ಹಾಗೂ ಕಡತಗಳನ್ನು

ಸಮಾಲೋಚಕರಾದ ಶ್ರೀ ಮುಬಾರಕ್ ಅಹ್ಮದ್ , ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ರವರ ಮುಖಾಂತರ ಉಪ ನಿರ್ದೇಶಕರು-1 ರವರಿಗೆ ಸಲ್ಲಿಸಲು ಈ ಮೂಲಕ ಆದೇಶಿಸಿದೆ.

| ಕ್ರ.ಸಂ. | ಕಡತ ಸಂಖ್ಯೆ | ವಿಷಯ | ಕಂಡಿಕೆ ಮತ್ತು ಪುಟ ಸಂಖ್ಯೆ |
|---|---|---|---|
| 1. | ಗ್ರಾಅಪ 374 ಗ್ರಾಪಂಕಾ 2013 (C-72068) | ದಿನಾಂಕ:31.12.2011 ರಲ್ಲಿರುವಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾಪಟ್ಟಿ ಪ್ರಕಟಿಸುವ ಬಗ್ಗೆ | ಕಂಡಿಕೆ: 1-52<br>ಪುಟ: 1-430 |
| 2. | ಗ್ರಾಅಪ 197 ಗ್ರಾಪಂಕಾ 2019 (C-12047) | ಅರ್ಜಿ ಸಂಖ್ಯೆ:2259-2261/2014 ಹಾಗೂ ಇತರ ಅರ್ಜಿಗಳಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ:18.03.2019 ರಂದು ನೀಡಿರುವ ತೀರ್ಪಿನಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾಪಟ್ಟಿಯನ್ನು ರದ್ದುಪಡಿಸಿರುವ ಬಗ್ಗೆ ಸಮಿತಿ ರಚನೆ-ಮೇಲ್ಮನವಿ ಸಲ್ಲಿಕೆ. | ಕಂಡಿಕೆ: 1-92<br>ಪುಟ: 1-290 |
| 3. | ಗ್ರಾಅಪ 352 ಗ್ರಾಪಂಕಾ 2019 (C-121553) | ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಪರಿಷ್ಕೃತ ಜೇಷ್ಠತಾಪಟ್ಟಿ ಪ್ರಕಟಿಸುವ ಬಗ್ಗೆ | Volume – I<br>ಕಂಡಿಕೆ: 1-118<br>ಪುಟ: 1-506<br>Volume – I I<br>ಪುಟ: 1-1067 |
| 4. | ಗ್ರಾಅಪ 193 ಗ್ರಾಪಂಕಾ 2018 (C-117991) | ಕೆ.ಎ.ಟಿ ಅರ್ಜಿ ಸಂಖ್ಯೆ: 5444-5485/2018 ಶ್ರೀ ಎಸ್. ರಮೇಶ್, ಪಿ.ಡಿ.ಓ ಬೆಂಗಳೂರು ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು. | ಕಂಡಿಕೆ: 1-20<br>ಪುಟ: 1-13 |

**ಆಯುಕ್ತರು**
**ಪಂಚಾಯತ್ ರಾಜ್ ಆಯುಕ್ತಾಲಯ,**
**ಬೆಂಗಳೂರು.**

**ಇವರಿಗೆ,**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
2. ಉಪ ಕಾರ್ಯದರ್ಶಿ, (ಸೇ- ಬಿ ಮತ್ತು ಸಿ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು.
3. ನಿರ್ದೇಶಕರು(ಪಂ.ರಾಜ್-1 ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು.
4. ಸಂಬಂಧಪಟ್ಟವರಿಗೆ.
5. ಕಛೇರಿ ಪ್ರತಿ.